(ಪಂ. ರವಿಶಂಕರ್ ಅವರ ಮೊದಲ ಪತ್ನಿ) ಎಂದು ನಾಮಕರಣ ಮಾಡುವುದರ ಜೊತೆಗೆ ಪ್ರತಿ ದಿನ ಎರಡು ಬಾರಿ ಸರಸ್ವತಿ ಪೂಜೆಯನ್ನೂ ಸಹ ಮಾಡುತ್ತಿದ್ದರು. ಸಂಗೀತ ಲೋಕದ ಇಂತಹ ಮಹಾನ್ ಕಲಾವಿದರ ಹೃದಯ ವೈಶಾಲ್ಯದಿಂದಾಗಿ ಹಿಂದೂಸ್ತಾನಿ ಸಂಗೀತದಲ್ಲಿ ಹಿಂದೂ ಧರ್ಮಕ್ಕೆ ಸೇರಿದ ಜಗದ್ವಿಖ್ಯಾತ ಕಲಾವಿದರು ಉದಯಿಸುವಂತಾಯಿತು. ಕೇಸರಿಬಾಯಿ ಕೇರ್ಕರ್, ಮುಗುಬಾಯಿ ಕುರ್ಡಿಕರ್, ಮಲ್ಲಿಕಾರ್ಜುನ ಮನ್ಸೂರ, ಸವಾಯಿ ಗಂಧರ್ವ, ಪಂಡಿತ್ ರವಿಶಂಕರ್, ದೊಂಡುತಾಯಿ ಕುಲಕರ್ಣಿ ಹೀಗೆ ಹಲವಾರು ಕಲಾವಿದ, ಕಲಾವಿದೆಯರು ಮುಸ್ಲಿಂ ಗುರುಗಳಿಂದ ಸಂಗೀತದ ದೀಕ್ಷೆ ಪಡೆದವರಾಗಿದ್ದಾರೆ. ಇಂತಹದ್ದೇ ಉದಾರ ಮನೋಭಾವ ಉಸ್ತಾದ್ ಗುಲಾಂ ಅಲಿ ಖಾನ್ ಅವರಿಗೂ ಇತ್ತು. ಮುಂಬೈ ನಗರದಲ್ಲಿ ಜರುಗಿದ ಸಂಗೀತ ಸಮ್ಮೇಳನದಲ್ಲಿ ಕರ್ನಾಟಕ ಸಂಗೀತದ ಗಾಯಕಿ ಎಂ.ಎಸ್. ಸುಬ್ಬುಲಕ್ಷ್ಮಿಯವರ ಸಂಗೀತವನ್ನು ಕೇಳಿ 'ಮಗಳೇ ನೀನು ಸುಬ್ಬುಲಕ್ಷ್ಮಿಯಲ್ಲ, ಸ್ವರಲಕ್ಷ್ಮಿ' ಎಂದು ಹೇಳುವುದರ ಮೂಲಕ ಅವರಿಗೆ ಶುಭ ಹಾರೈಸಿದ್ದರು. ದಕ್ಷಿಣ ಭಾರತದ ಅನೇಕ ಕಲಾವಿದರೊಂದಿಗೆ ನಿಕಟ ಸಂಬಂಧ ಇಟ್ಟುಕೊಂಡಿದ್ದ ಗುಲಾಮ ಅಲಿ ಖಾನ್ ಪ್ರತಿ ವರ್ಷ ಡಿಸೆಂಬರ್ ತಿಂಗಳಿನಲ್ಲಿ ಮದ್ರಾಸ್ ನಗರಕ್ಕೆ ಭೇಟಿ ನೀಡುವುದರ ಜೊತೆಗೆ ಸಂಗೀತ ಕಛೇರಿ ನಡೆಸಿಕೊಡುತ್ತಿದ್ದರು. ಕರ್ನಾಟಕ ಸಂಗೀತದ ಅನೇಕ ಹಿರಿಯ ಕಲಾವಿದರು, ವಿದ್ವಾಂಸರ ಜೊತೆಗೆ ನಗರದಲ್ಲಿ ನಡೆಯುತ್ತಿದ್ದ ಕರ್ನಾಟಕ ಸಂಗೀತದ ಕಛೇರಿಗಳಲ್ಲಿ ಪಾಲ್ಗೊಳ್ಳುತ್ತಿದ್ದರು.

ಸಂಗೀತ ಲೋಕದ ಹಾಡುಹಕ್ಕಿಗಳನ್ನು ಧರ್ಮದ ಹೆಸರಿನಲ್ಲಿ ಪ್ರತಿಬಂಧಿಸುತ್ತಿರುವ ಇಂದಿನ ದಿನಮಾನಗಳಲ್ಲಿ ಉಸ್ತಾದ್ ಬಡೇ ಗುಲಾಂ ಅಲಿ ಖಾನ್ ಅವರಂತಹ ಸಂಗೀತ ಲೋಕದ ಸಂತರ ಬದುಕು ನಮಗೆ ಆದರ್ಶವಾಗುವುದರ ಜೊತೆಗೆ, ನಮ್ಮೊಳಗಿನ ಮನೋವಿಕಾರಕ್ಕೆ ಮದ್ದಾಗ ಬಲ್ಲದು.

## ಜಗದೀಶ ಕೊಪ್ಪ

ಪತ್ರಕರ್ತ, ಲೇಖಕ ಜಗದೀಶ ಕೊಪ್ಪ ಮಂಡ್ಯ ಜಿಲ್ಲೆಯ ಕೊಪ್ಪದವರು. ಹುಬ್ಬಳ್ಳಿಯಲ್ಲಿ ಪತ್ರಕರ್ತರಾಗಿ ಕೆಲಸ ಮಾಡುತ್ತಿರುವ ಅವರು ತಮ್ಮ ಅನುವಾದಗಳು, ವ್ಯಕ್ತಿಚಿತ್ರಗಳ ಮೂಲಕ ನಾಡಿನ ಆಸಕ್ತರ ಗಮನ ಸೆಳೆದಿದ್ದಾರೆ. 'ಎಂದೂ ಮುಗಿಯದ ಯುದ್ಧ', 'ಬಿಳಿ ಸಾಹೇಬನ ಭಾರತ', 'ಪುತ್ರ ಶೋಕ', 'ಗಟ್ಟಿದನಿಯ ದಿಟ್ಟ ಕಲಾವಿದೆ ಬೆಂಗಳೂರು ನಾಗರತ್ನಮ್ಮ', 'ಮನದೊಳಗಿನ ಸುಪ್ರಭಾತ ಎಂ.ಎಸ್. ಸುಬ್ಬುಲಕ್ಷ್ಮಿ', 'ಸಂಗೀತವನದ ಕೋಗಿಲೆ ಎಂ.ಎಲ್. ವಸಂತ ಕುಮಾರಿ' ಅವರ ಕೆಲವು ಪ್ರಕಟಿತ ಪುಸ್ತಕಗಳಾಗಿವೆ. ಪ್ರಸ್ತುತ ಅವರು ಧಾರವಾಡದಲ್ಲಿ ನೆಲೆಸಿದ್ದಾರೆ.